ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೧೬ನೇ ಮಾರ್ಚಿ ೧೯೮೭ ಫಾಲ್ಗುಣ ೨೫, ಶಕ ೧೯೦೮

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು].

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಪ್ರಶ್ನೆ ೧೧೨೫ ಮಾನ್ಯ ಸದಸ್ಯರು ಗೈರು ಹಾಜರಿ

ಮಂಲ್ಪೆಯಲ್ಲಿ ಸಾರ್ವಜನಿಕ ಕ್ರೀಡಾಂಗಣ

೯೩೫. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಲ್ಪೆಯಲ್ಲಿ ಸಾರ್ವಜನಿಕರ ಆಟದ ಮೈದಾನ ಮತ್ತು ಸಾಂಸ್ಕೃತಿಕ ಚಟುವಟಿಕೆ ನಡೆಸಲು ಸ್ಥಳ ಇಲ್ಲವೇ ?

ಆ) ಗಾಂಧಿ ಶತಾಬ್ದಿ ಹಿರಿಯ ಪ್ರಾಥಮಿಕ ಶಾಲೆಯ ಹತ್ತಿರ ಎರಡು ಎಕರೆ ಜಮೀನು ಸಾರ್ವಜನಿಕ ಸ್ಥಳವೆಂದು ಆಟದ ಮೈದಾನಕ್ಕಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಬಹುದೆಂದು ಘೋಷಣೆ ಯಾಗಿದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಶ್ರೀಮತಿ ಮನೋರಮ ಮಧ್ವರಾಜ್.—ನಾನು ಕೇಳಿರುವಕ್ಕೆ ಪ್ರಶ್ನೆ ಒಂದು, ಅವರು ಕೊಟ್ಟಿರುವಕ್ಕೆ ಉತ್ತರವೇ ಒಂದು. ಮಲ್ಪೆಯಲ್ಲಿ ಸಾರ್ವಜನಿಕ ಕ್ರೀಡೆಗಳನ್ನು ಅಥವಾ ಸಾಮಾಜಿಕ ಸಮಾರಂಭಗಳನ್ನು ನಡೆಸುವುದಕ್ಕಾಗಿ ಸಾರ್ವಜನಿಕ ಪ್ರದೇಶ ಇಲ್ಲದಿರುವುದು ನಿಜವೇ ಎಂದು ಕೇಳಿದ್ದಕ್ಕೆ 'ನಿಜ' ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇನ್ನು ಎರಡನೆಯ ಪ್ರಶ್ನೆ, ಕ್ರೀಡೆಗಳನ್ನು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದಕ್ಕೆ ಗಾಂಧಿ ಶತಾಬ್ದಿ ಹಿರಿಯ ಪ್ರಾಥಮಿಕ ಶಾಲೆಯ ಬಳಿಯಿರುವ ೨ ಎಕರೆ ಜಮೀನನ್ನು ಸಾರ್ವಜನಿಕ ಪ್ರದೇಶವೆಂದು ಘೋಷಿಸಲಾಗುವುದೆ ? ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದೀರಿ. ಗ್ರಾಮೀಣ ಪ್ರದೇಶಗಳಲ್ಲಿರುವಕ್ಕೆ ಯುವಕರಿಗೆ ನೀವು ಈ ರೀತಿಯ ಪ್ರೋತ್ಸಾಹ ಕೊಟ್ಟರೆ ಹೇಗೆ ? ಪಟ್ಟಣದಲ್ಲಿರುವಕ್ಕವರಿಗೆ ಕ್ರೀಡಾಂಗಣ ರಚಿಸಿ. ಗ್ರಾಮೀಣ ಪ್ರದೇಶದ ಯುವಕರಿಗೆ ಅನುಕೂಲ ಮಾಡಿಕೊಡಲಿಲ್ಲ ಎಂದರೆ ಅವರಿಗೆ ಮೋಸಮಾಡಿದಂತೆ ಆಗುವುದಿಲ್ಲವೇ ? ಆದ್ದರಿಂದ, ಕ್ರೀಡಾಂಗಣ ಮಾಡಿಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಅಲ್ಲಿ ಸರ್ಕಾರಿ ಜಾಗ ಇದ್ದರೂ ಸಹ ಅದು ಗೋಮಾಳ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಈಗಾಗಲೇ ಕರೆಸ್‌ಪಾಂಡೆನ್ಸ್ ಆಗಿರುತ್ತಿದೆ. ಅದು ತಹಶೀಲ್ದಾರ್, ಜಿಲ್ಲಾಧಿಕಾರಿಯವರಿಗೆ ಹೋಗಿದೆ. ಅಲ್ಲಿ ಸರ್ಕಾರಿ ಜಾಗ ಇದ್ದರೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಮನೋರಮ ಸಿದ್ಧರಾಜ್.—ಅದು ಗೋಮಾಳದ ಜಾಗ ಅಲ್ಲ. ಅಲ್ಲಿ ಬೇಕಾದಷ್ಟು ಜನ ಮನೆ ಕಟ್ಟಿಸಿಕೊಂಡಿದ್ದಾರೆ. ಆ ಜಾಗವನ್ನು ಮಕ್ಕಳಹೆಸರಿಗೆ ಬರೆದುಕೊಡುವಂಥಾದ್ದು ಏನೂ ಇಲ್ಲ, ಮಕ್ಕಳ ಆಟಕ್ಕೋಸ್ಕರ ಅವಕಾಶ ಮಾಡಿಕೊಡುವುದು ಇದೆ. ಅದು ಶಾಲೆಗೆ ಸೇರಿದ್ದ ಜಾಗ.

ಶ್ರೀ ಡಿ. ಮಂಜುನಾಥ್.—ಶಾಲೆಯ ಜಾಗ ಇದ್ದರೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀಮತಿ ಮನೋರಮ ಸಿದ್ಧರಾಜ್.—ಆ ಶಾಲೆಗೆ ಕೊಟ್ಟು ಆಗಿದೆ.

ಶ್ರೀ ಡಿ. ಮಂಜುನಾಥ್.—ಶಾಲೆಯ ಜಾಗ ಇದ್ದರೆ ತೊಂದರೆ ಇಲ್ಲ. ಆದನ್ನು ವಶಕ್ಕೆ ತೆಗೆದು ಕೊಳ್ಳುವುದಕ್ಕೆ ಡಿ. ಸಿ. ಮತ್ತು ಎ. ಸಿ. ಅವರಿಗೆ ಕರೆಸ್‌ಪಾಂಡೆನ್ಸ್ ಮಾಡಿದ್ದೇವೆಂದು ಮಾಹಿತಿ ಕಳುಹಿಸಿದ್ದಾರೆ. ಆದ್ದರಿಂದ, ಅದರ ಬಗ್ಗೆ ನಾನೇ ಖುದ್ದು ವಿಚಾರಿಸುತ್ತೇನೆ.

ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರಿಂದ ಪಂಪ್‌ಸೆಟ್ಟುಗಳ ಖರೀದಿ

೧೯೭. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರು ಸಬ್‌ಮರ್ಸಿಬಲ್ ಪಂಪ್‌ಸೆಟ್ಟುಗಳನ್ನು ಖರೀದಿ ಸುತ್ತಿರುವ ಕಂಪನಿಯಾ ಹೆಸರೇನು ? ಹಾಗೂ ಈವರೆಗೆ ಈ ಕಂಪನಿಯಿಂದ ಕೊಂಡಿರುವ ಪಂಪ್ ಸೆಟ್ಟುಗಳ ಸಂಖ್ಯೆ ಎಷ್ಟು ?

ಆ) ಈ ಬಗ್ಗೆ ಏನಾದರೂ ಟೆಂಡರ್ ಕರೆದು ಕೊಟೇಶನ್ ಪಡೆದಿದ್ದಾರೆಯೆ ?

ಇ) ಹಾಗಿದ್ದಲ್ಲಿ ಆ ಕಂಪನಿಗಳ ಹೆಸರುಗಳೇನು? ಆ ಪೈಕಿ ಕಡಿಮೆ ಟೆಂಡರ್ ಕೊಟ್ಟಿರುವ ಕಂಪನಿ ಹೆಸರೇನು ?

ಈ) ಕಡಿಮೆ ಕೊಟೇಶನ್ ಕೊಟ್ಟಿರುವ ಕಂಪನಿಗೆ ಆರ್ಡರ್ ಕೊಡದಿರಲು ಕಾರಣವೇನು ? ಇದರಿಂದ, ರೈತರ ಮೇಲೆ ಹೊರೆ ಆಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕಾ ರಾಜ್ಯ ಸಚಿವರು).—

ಅ) ಕಂಪನಿಗಳ ಹೆಸರು ಮತ್ತು ೧೯೮೬-೮೭ರಲ್ಲಿ ಖರೀದಿಸಿರುವ ಪಂಪುಸೆಟ್ಟುಗಳ ಸಂಖ್ಯೆ ಈ ಕೆಳಕಂಡಂತಿವೆ.—

ಕ್ರಮ ಸಂಖ್ಯೆ	ಫರ್ಮಿನ ಹೆಸರು	ಕೊಂಡ ಪಂಪ್ ಸೆಟ್ಟುಗಳ ಸಂಖ್ಯೆ
೧	ಪ್ರೊಟೆಕ್ಟೋ ಇಂಜಿನಿಯರಿಂಗ್ ಕಾರ್ಪೊರೇಷನ್ ಲಿಮಿಟೆಡ್	೧,೧೨೯
೨	ದೀಪಿಕಾ ಎಂಟರ್‌ಪ್ರೈಸಸ್	೨೨
೩	ಎಂ.ಬಿ ಪೆಚ್. ಪಂಪ್ಸ್ ಪ್ರೈ. ಲಿಮಿಟೆಡ್	೧೦
೪	ಕರ್ನಾಟಕ ಸ್ಮಾಲ್ ಇಂಡಸ್ಟ್ರೀಸ್ ಮಾರ್ಕೆಟಿಂಗ್ ಕಾರ್ಪೊರೇಷನ್ ಲಿ.	೩
೫	ಬಜಾಜ್ ಎಲೆಕ್ಟ್ರಿಕಲ್ಸ್ ಲಿ.	೩
	ಒಟ್ಟು	೧,೧೬೭